C.C.No.:768/2015

P.W.:1

ಈ ದಿನ ದಿಃ 31-08-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ 1 ರಿಂದ 4 ನೇ ಆರೋಪಿತರ ಪರ ಶ್ರೀ ಎಸ್ ಎಮ್ ಬಿ ವಕೀಲರಿಂದಃ

ಹಂದಿಗುಂದ ಬ್ಯಾಂಕಿಗೆ ನಾನು ಬೇಟಿ ಕೊಟ್ಟಾಗ ಸರ್ವೇ ನಂ.376/9 ಜಮೀನು ಇದನ್ನು ಆರೋಪಿತರು ತಮ್ಮ ಹೆಸರಿಗೆ ಮಾಡಿಸಿಕೊಂಡಿರುವುದು ನನಗೆ ತಿಳಿದುಬಂದಿರುತ್ತದೆ. ಬ್ಯಾಂಕಿನ ಹೆಸರು ನನಗೆ ಹೇಳಲು ಗೊತ್ತಾಗುವುದಿಲ್ಲ ನಾನು ಅವಿದ್ಯಾವಂತೆ. ನಾನು ಬ್ಯಾಂಕಿಗೆ ಹೋದ ದಿನಾಂಕ ತಿಂಗಳು ಮತ್ತು ವರ್ಷ ಹೇಳಲು ಗೊತ್ತಾಗುವುದಿಲ್ಲ ನಾನು ಅವಿದ್ಯಾವಂತೆ. ಸರ್ವೇ ನಂ.376/9 ರ ಆಸ್ತಿಯು ನಮಗೆ ಸೇರಿದ್ದು, ಯಲ್ಲಪ್ಪ ಖಾನಪ್ಪಗೋಳ ಇವರು ಬೇರೆಯವರ ಕಡೆಯಿಂದ ಖರೀದಿ ಮಾಡಿದ್ದು ಅದು ನನ್ನ ಗಂಡನ ಹೆಸರಿನಲ್ಲಿತ್ತು. ಅವರು ಸತ್ತು ಸುಮಾರು 30 ವರ್ಷಗಳು ಆಗಿರುತ್ತದೆ. ನನ್ನ ಗಂಡ ಯಾರಿಗೂ ಆಸ್ತಿಯನ್ನು ಮಾರಾಟ ಮಾಡಿರುವುದಿಲ್ಲ. ಸರ್ವೇ ನಂ.376/9 ರ ಆಸ್ತಿಯ ವಿಸ್ತೀರ್ಣ 1 ಎ-10 ಗು ಇದ್ದು ಸದರಿ ಆಸ್ತಿಯು ನನ್ನ ಮಾವನಿಂದ ನನ್ನ ಗಂಡನಿಗೆ ಬಂದಿರುತ್ತದೆ. ಸರ್ವೇ ನಂ.376/9 ರ ಆಸ್ತಿಯ ಚಕಬಂದಿ ಹೇಳುವೀರಾ ಎಂದು ಆರೋಪಿ ಪರ ವಕೀಲರು ಸಾಕ್ಷಿಗೆ ಕೇಳಲಾಗಿ ಸಾಕ್ಷಿಯು ನನಗೆ ದಿಕ್ಕುಗಳ ಬಗ್ಗೆ ಹೇಳಲು ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂ.376/9 ರ ಆಸ್ತಿಯು ನನ್ನ ಗಂಡನಿಗೆ ಸಂಬಂಧಿಸಿದ್ದು ಅಲ್ಲ ಎಂದರೆ ಸರಿಯಲ್ಲ. ಸರ್ವೇ ನಂ.376/9 ರ ಆಸ್ತಿಯು ಮೂಲ ನಮ್ಮದು ಇದ್ದು ಈಗ ಸ್ವಾಧೀನದಲ್ಲಿ ಯಲ್ಲಪ್ಪ ಖಾನಪ್ಪಗೋಳ ಇರುತ್ತಾರೆ. ನೊಂದಣಿ ಕಚೇರಿಯಲ್ಲಿ ಕಾಗದಪತ್ರಗಳನ್ನು ತೆಗೆಸಿ ನೋಡಲಾಗಿ ಆರೋಪಿತರು ಸರ್ವೇ ನಂ.376/9 ರ ಆಸ್ತಿಯನ್ನು ಖರೀದಿ ಮಾಡಿರುವುದು ಕಂಡುಬಂದಿರುತ್ತದೆ. ಆರೋಪಿತರೇ ಸುಳ್ಳು ಕಾಗದ ಪತ್ರ ತಯಾರು ಮಾಡಿರುತ್ತಾರೆಂದು ಯಾವುದೇ ಕಾಗದ ಪತ್ರ ನೋಡಿಲ್ಲ ಎಂದರೆ ಸರಿಯಲ್ಲ. ಆರೋಪಿತರೇ ಬೋಗಸ ಖರೀದಿ ಪತ್ರ ಮಾಡಿರುತ್ತಾರೆಂದು ತಿಳಿಯಲು ವಿಧಿವಿಜ್ಞಾನ ಕೇಂದ್ರಕ್ಕೆ ಕಳಿಸಿಲ್ಲ. ಯಾವುದೇ ಆಸ್ತಿಯನ್ನು ನೊಂದಣಿ ಕಚೇರಿಯಲ್ಲಿ ನೊಂದಣಿ ಮಾಡಬೇಕಾದರೆ ಪ್ರಾಪರ್ಟಿಗೆ ಸಂಬಂಧಪಟ್ಟ ವ್ಯಕ್ತಿಗಳ ಗುರುತಿನ ಚೀಟಿಯನ್ನು ನೋಡಿ ಮಾಡುತ್ತಾರೆಂದರೆ ಸರಿಯಲ್ಲ.

ಖರೀದಿ ಪತ್ರವು ಬೋಗಸನಿಂದ ಕೂಡಿರುತ್ತದೆ ಎಂದು ಅದನ್ನು ರದ್ದತಿಗಾಗಿ ಸಿವಿಲ್ ನ್ಯಾಯಾಲಯದ ಮುಂದೆ ಯಾವುದೇ ದಾವೆ ಹೂಡಿಲ್ಲ. 1 ನೇ ಆರೋಪಿಯೊಂದಿಗೆ ನಾನು ಚೆನ್ನಾಗಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯು ನೊಂದಣಿ ಕಚೇರಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ಅವನ ವಿರುದ್ಧ ಸುಳ್ಳು ಪಿರ್ಯಾದಿ ಕೊಟ್ಟಿರುತ್ತೇನೆಂದರೆ ಸರಿಯಲ್ಲ. 1 ನೇ ಆರೋಪಿಯ ಜೊತೆ ವೈರತ್ವ ಇದ್ದುದ್ದರಿಂದ ನಾನು ಸುಳ್ಳು ಪಿರ್ಯಾದಿ ಕೊಟ್ಟಿರುತ್ತೇನೆಂದರೆ ಸರಿಯಲ್ಲ. 1 ನೇ ಆರೋಪಿ ನೊಂದಣಿ ಕಚೇರಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ಪಿರ್ಯಾದಿಯಲ್ಲಿ ಬರೆದಿರುವ ವಿಚಾರ ನನಗೆ ಹೇಳಲು ಗೊತ್ತಿಲ್ಲ ನಾನು ಅವಿದ್ಯಾವಂತೆ. ಪಿರ್ಯಾದಿಯನ್ನು ನಾನೇ ಹೇಳಿ ಬೇರೊಬ್ಬರಿಂದ ಬರೆಸಿರುತ್ತೇನೆ. ಸರ್ವೇ ನಂ.376/9 ರ ಆಸ್ತಿಯು ನನ್ನ ಗಂಡನಿಗೆ ಸೇರಿದ್ದು ಎಂದರೆ ಸರಿಯಲ್ಲ. ಸದರಿ ಆಸ್ತಿಯು ಪಂಡಪ್ಪ ಗಂಗಪ್ಪ ಕಳಸನ್ನವರ ಆಸ್ತಿ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಮಾಡಿರುವ ಮರಣ ಪ್ರಮಾಣಪತ್ರಗಳನ್ನು ಈ ಕೇಸಿಗೆ ಸಂಬಂಧಿಸಿದವು ಅಲ್ಲ ಎಂದರೆ ಸರಿಯಲ್ಲ. ಸರ್ವೇ ನಂ.376/9 ರ ಆಸ್ತಿಯು ಟೆನಸ್ಸಿಯಿಂದ ಭೂನ್ಯಾಯಮಂಡಳಿಯಿಂದ ಬಂದಿರುತ್ತದೆ. ನಿಪಿ14 ರಿಂದ 18 ಇವು ನನ್ನ ಗಂಡನಿಗೆ ಸಂಬಂಧಿಸಿದವು ಎಂದರೆ ಸರಿಯಲ್ಲ. ಪಿರ್ಯಾದಿ ಕೊಡಲು ನನ್ನ ಅಳಿಯನನ್ನು ಕರೆದುಕೊಂಡು ಹೋಗಿದ್ದೆ. ಪಿರ್ಯಾದಿ ಕೊಡಲು ನಾನು ಮೂಡಲಗಿ ಪೊಲೀಸ ಠಾಣೆಗೆ ಹೋಗಿದ್ದೆ. ಪಿರ್ಯಾದಿ ಕೊಟ್ಟ ನಂತರ ನಾನು ಪುನಃ ಪೊಲಿಸ್ ಠಾಣೆಗೆ ಹೋಗಿ ನನ್ನ ಹೇಳಿಕೆ ಕೊಟ್ಟಿರುತ್ತೇನೆ. ಪಿರ್ಯಾದಿ ಕೊಟ್ಟ ನಂತರ ನಾನು ಪುನಃ ಪೊಲಿಸ್ ಠಾಣೆಗೆ ಎಷ್ಟು ದಿನಗಳ ನಂತರ ಹೋಗಿದ್ದೆ ಎಂದು ನನಗೆ ನೆನಪಿಲ್ಲ. ಸರ್ವೇ ನಂ.376/9 ರ ಆಸ್ತಿಯಲ್ಲಿ ಕಬ್ಬನ್ನು ಬೆಳೆದು ಸೈದಾಪುರ ಕಾರ್ಖಾನೆಗೆ ಕಳಿಸುತ್ತಿದ್ದೆವು. ಸಕ್ಕರೆ ಕಾರ್ಖಾನೆಗೆ ಕಬ್ಬನ್ನು ಕಳಿಸಿದ ಬಗ್ಗೆ ಈಗ ಅದರ ರಶೀದಿಗಳು ನನ್ನ ಹತ್ತಿರ ಇಲ್ಲ. ಸಕ್ಕರೆ ಕಾರ್ಖಾನೆಗೆ ಕಬ್ಬನ್ನು ಕಳಿಸುವಾಗ ಕಬ್ಬನ್ನು ಬೆಳೆದಿರುವ ಸರ್ವೇ ನಂಬರ ಆಸ್ತಿಯನ್ನು ನಮೂದು ಮಾಡಿರುತ್ತೇವೆಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿಃ 24-02-2014 ಕ್ಕಿಂತ ಮೊದಲೇ ಆಸ್ತಿಯು ಖರೀದಿ ಆದ ಬಗ್ಗೆ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪಿರ್ಯಾದಿ ಕೊಟ್ಟಿರುತ್ತೇನೆಂದರೆ ಸರಿಯಲ್ಲ. ಸರ್ವೇ ನಂ.376/9 ರ ಆಸ್ತಿಯ ಸಲುವಾಗಿ ಗೋಕಾಕ ನ್ಯಾಯಾಲಯದಲ್ಲಿ ಸಿವಿಲ್ ದಾವೆ ಇದೆ ಎಂದರೆ ಸರಿಯಲ್ಲ. ಆರೋಪಿ ಪರ ವಕೀಲರು ಸಾಕ್ಷಿಗೆ ಆರೋಪಿತರ ಮತ್ತು ನನ್ನ ನಡುವೆ ಗೋಕಾಕ ನ್ಯಾಯಾಲಯದಲ್ಲಿ ಸಿವಿಲ್ ದಾವೆ ಇರುತ್ತದೆ ಎಂದರೆ ಸಾಕ್ಷಿಯು ಅದು ಬೇರೆ ಆಸ್ತಿಗೆ ಸಂಬಧಪಟ್ಟ ಕೇಸ ಇರುತ್ತದೆ ಎಂದು ನುಡಿಯುತ್ತಾರೆ. ಆರೋಪಿತರ ವಿರುದ್ಧ ಸುಳ್ಳು ಪಿರ್ಯಾದಿ ಕೊಟ್ಟಿರುತ್ತೇನೆಂದರೆ ಸರಿಯಲ್ಲ. ಸದರಿ ಕೇಸಿನಲ್ಲಿರುವ ಎಲ್ಲ ಸಾಕ್ಷಿಗಳು ನನ್ನ ಸಂಬಂಧಿಕರೆ ಎಂದರೆ ಸರಿ. ಆರೋಪಿ ನಂ.3 ರಿಂದ 5 ಇವರು ನಕಲಿ ಸಹಿಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಈ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಆರೋಪಿತರ ವಿರುದ್ಧ ಸುಳ್ಳು ಪಿರ್ಯಾದಿ ಕೊಟ್ಟು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ  5 ನೇ ಆರೋಪಿತರ ಪರ ವಕೀಲರಿಂದಃ

1 ರಿಂದ 4 ನೇ ಆರೋಪಿಪರ ವಕೀಲರು ಮಾಡಿದ ಪಾಟೀ ಸವಾಲನ್ನು 5 ನೇ ಆರೋಪಿಗೆ ಅಳವಡಿಸಿಕೊಳ್ಳಲಾಯಿತು.

ಪಾಟೀ ಸವಾಲುಃ  6 ಮತ್ತು 7 ನೇ ಆರೋಪಿತರ ಪರ ಶ್ರೀ  ವಕೀಲರಿಂದಃ

ಚಾಸಾ 2 ನನ್ನ ಮಗಳಿಗೆ ಅಂದಾಜು ಈಗ 30 ವರ್ಷ ಆಗಿರುತ್ತದೆ ನನಗೆ ವಯಸ್ಸು ಹೇಳಲು ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಗಂಡ ಸತ್ತ ನಂತರ 2010 ರ ಮೊದಲು ಸರ್ವೇ ನಂ.376/9 ರ ಆಸ್ತಿಯನ್ನು ವಾರಸಾ ಮಾಡಿಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ ಮುಂದುವರೆದು ನಿಧಾನವಾಗಿ ಮಾಡಿಕೊಳ್ಳೋಣ ಎಂದು ಸುಮ್ಮನಿದ್ದೆವು ಎಂದು ನುಡಿಯುತ್ತಾರೆ. ಸರ್ವೇ ನಂ.376/9 ರ ಆಸ್ತಿಯು ನಮಗೆ ಸಂಬಂಧಿಸಿದ್ದು ಅಲ್ಲ ಎಂದರೆ ಸರಿಯಲ್ಲ. 6 ಮತ್ತು 7 ನೇ ಆರೋಪಿತರು ನಕಲಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ.  ಸದರಿ ಆಸ್ತಿಯು ಆರೋಪಿ ನಂ.1 ರಿಂದ 5 ಇವರಿಗೆ ಸಂಬಂಧಿಸಿದ್ದು ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ ಮತ್ತು ಸುಳ್ಳು ಕಾಗದ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ನ್ಯಾ ದಂ. ಪ್ರ. ವರ್ಗ ಮೂಡಲಗಿ.